**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ರವಿ, ಡಾ: ಕೆ. ಗೋವಿಂದರಾಜು, ಶ್ರೀ ಮರಿತಿಬ್ಬೇಗೌಡ, ಶ್ರೀ ಮಂಜುನಾಥ್ ಭಂಡಾರಿ, ಶ್ರೀ ಸಿ. ಎಂ. ಲಿಂಗಪ್ಪ, ಎಂ. ಎಲ್. ಅನಿಲ್ ಕುಮಾರ್, ಶ್ರೀ ಮಧು ಜಿ. ಮಾದೇಗೌಡ ಹಾಗೂ ದಿನೇಶ್ ಗೂಳಿಗೌಡರ ಇವರುಗಳು ನಿಯಮ-330ರಡಿ ಗಮನ ಸೆಳೆದಿರುವ ಸೂಚನೆಗೆ ಹೇಳಿಕೆ:**

* * ****

**ಸೂಚನೆ:**

ರಾಜ್ಯದಲ್ಲಿರುವ ಒಕ್ಕಲಿಗರ ಜನಸಂಖ್ಯೆಯ ಅನುಗುಣವಾಗಿ ಪ್ರಸ್ತುತ ಇರುವ ಮೀಸಲಾತಿಯ ಪ್ರಮಾಣವು ಕಡಿಮೆ ಇದೆ. ಈ ಹಿನ್ನಲೆಯಲ್ಲಿ ಮೀಸಲಾತಿಯನ್ನು ಹೆಚ್ಚಿಸುವ ಅಗತ್ಯತೆಯು ಇದ್ದು, ಪ್ರಸ್ತುತ ಒಕ್ಕಲಿಗರಿಗೆ ಇರುವ ಮೀಸಲಾತಿ ಶೇ. 4ರಿಂದ ಶೇ.12ಕ್ಕೆ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವ ಕುರಿತು.

********

**ಹೇಳಿಕೆ:**

ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002 ರ ಆದೇಶದಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಿದ್ದು, ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿ ಆದೇಶಿಸಿದೆ.

ಅದರನ್ವಯ ಒಕ್ಕಲಿಗ ಸಮುದಾಯವು ಸೇರಿದಂತೆ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-III ಎ ರಲ್ಲಿಬರುವ ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಶೇಕಡ 4 ರ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಒಕ್ಕಲಿಗರಿಗೆ ಪ್ರಸ್ತುತ ಶೇಕಡ 4 ರ ಮೀಸಲಾತಿಯನ್ನು ಶೇಕಡ 12ಕ್ಕೆ ಹೆಚ್ಚಿಸುವಂತೆ ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು, ಒಕ್ಕಲಿಗರ ಪರ ಸಂಘ ಸಂಸ್ಥೆಗಳ ಒಕ್ಕೂಟ (ರಿ) ಬೆಂಗಳೂರು ಮತ್ತು ರಾಜ್ಯ ಮೀಸಲಾತಿ ಹೋರಾಟ ಸಮಿತಿ, ಬೆಂಗಳೂರು ಇವರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದು, ಸದರಿ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ವರದಿಯನ್ನು ನೀಡುವಂತೆ ದಿನಾಂಕ: 17.12.2022 ರಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವನ್ನು ಕೋರಲಾಗಿರುತ್ತದೆ. ಆಯೋಗದಿಂದ ವರದಿ ಬಂದ ನಂತರ ಈ ಕುರಿತು ಪರಿಶೀಲಿಸಲಾಗುವುದು.

**ಸಂಖ್ಯೆ: ಹಿಂವಕ 322 ಬಿಸಿಎ 2022**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು